ಸಿಂಪಲ್ ಸುನಿ ನಿರ್ದೇಶನದ 'ದೇವರು ರುಜು ಮಾಡಿದನು' ಸಿನಿಮಾದಲ್ಲಿ ನಟಿಸುತ್ತಿರುವ ದಿವಿತಾ ರೈ, ಮಂಗಳೂರಿನ ಚೆಲುವೆ. ರೂಪದರ್ಶಿಯಾಗಿ ದೇಶ ವಿದೇಶಗಳನ್ನು ಸುತ್ತಿರುವ ಅವರಿಗೀಗ ನಟನೆಯತ್ತ ಮನಸ್ಸು.

■ ಸುಮಲತಾ ಎನ್



# ದಿವಿತಾ ರೈ

## ಮಂಗಳೂರು ಮಲ್ಲಿಗೆ

ದಿವಿತಾ ರೈ ಹುಟ್ಟಿದ್ದು ಮಂಗಳೂರಾದರೂ, ಅಪ್ಪನದ್ದು ವರ್ಗಾವಣೆಯಾಗುತ್ತಲೇ ಇರುವ ನೌಕರಿಯಾದ್ದರಿಂದ ಅಪ್ಪ ಹೋದ ಕಡೆಯೇ ಶಿಕ್ಷಣ, ಜೊತೆಜೊತೆಗೆ ಬಾಲ್ಯವೂ ಸಾಗಿತ್ತು. ಬೇರೆ ಬೇರೆ ಊರುಗಳನ್ನು, ಜನರನ್ನು, ಬಗೆ ಬಗೆ ಜೀವನವನ್ನು ಕಂಡಿದ್ದ ದಿವಿತಾ ಅವರಲ್ಲಿ ಕೂಡ ಜೀವನದ ಬಗ್ಗೆ ಬಣ್ಣಬಣ್ಣದ ಕನಸುಗಳು ತುಂಬಿಕೊಂಡಿದ್ದವು.

ಮುಂಬೈನಲ್ಲಿ, ಆರ್ಕಿಟೆಕ್ಚರ್ ವಿಷಯದಲ್ಲಿ ಪದವಿ ಸೇರಿದ ಅವರಿಗೆ ಮೊದಲ ವರ್ಷದಲ್ಲಿಯೇ ಮಾಡೆಲಿಂಗ್ ಜೊತೆಯಾಯಿತು. ಸಾವಿರಾರು ಜನ ಅವಕಾಶಗಳಿಗಾಗಿ ಎಡತಾಕುವ ಮುಂಬೈನಲ್ಲಿ ತಮ್ಮದೊಂದು ನೆಲೆ, ಹೆಸರು ಕಂಡುಕೊಳ್ಳಲು ದಿವಿತಾ ಪಟ್ಟ ಪ್ರಯತ್ನ, ಹುಡುಕಾಟಗಳೇನೂ ಕಡಿಮೆಯದಾಗಿರಲಿಲ್ಲ. ಆ ಪ್ರಯತ್ನಗಳ ಹಾದಿಯಲ್ಲೇ ಅವರಿಗೆ ತೆರೆದುಕೊಂಡದ್ದು ಬಣ್ಣದ ಪ್ರಪಂಚ.

ರೂಪದರ್ಶಿಯಾಗಿ ಹಲವು ವೇದಿಕೆಗಳಲ್ಲಿ ಗುರುತಿಸಿಕೊಂಡಿದ್ದ ಅವರು 2022ರಲ್ಲಿ ಮೊದಲ ಬಾರಿ 'ಮಿಸ್ ಇಂಡಿಯಾ ಯೂನಿವರ್ಸ್' ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದರು. ಅದೃಷ್ಟವೋ ಎಂಬಂತೆ ಟೈಟಲ್ ಗೆಲುವು ಮುಡಿಯೇರಿತು. ಅಮೆರಿಕದಲ್ಲಿ ಸೌಂದರ್ಯ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ, 96 ದೇಶಗಳ ಸ್ಪರ್ಧಿಗಳ ನಡುವೆ 16ನೇ ಸ್ಥಾನ ಗಳಿಸಿದರು. ಆ ಗೆಲುವು ಅವರಲ್ಲಿ ಆತ್ಮವಿಶ್ವಾಸದ ಜೊತೆಗೆ ನಟನೆಯಲ್ಲಿ ಅವಕಾಶಗಳಿಗೆ ದಾರಿ ತೆರೆಯಿತು.

'ಕಾಲೇಜು ದಿನಗಳಲ್ಲಿಯೇ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಲು ಆರಂಭಿಸಿದ್ದೆ. ರೂಪದರ್ಶಿಯಾಗಿ ಹಲವು ವೇದಿಕೆಗಳಲ್ಲಿ ಕಾಣಿಸಿಕೊಂಡಿದ್ದೆ. ಆಗೆಲ್ಲ, ಚಿಕ್ಕಂದಿನಿಂದ ನನ್ನೊಳಗಿದ್ದ ನಟನೆ, ಹಾಡು, ನೃತ್ಯದೆಡೆಗಿನ ಪ್ರೀತಿ ನೆನಪಿಗೆ ಬರುತ್ತಿತ್ತು. ನಟನೆಯೆಡೆಗೆ ಆಸೆ ಇದ್ದರೂ ಅದಕ್ಕೆ ತೆಗೆದುಕೊಳ್ಳಬೇಕಾದ ದಾರಿ ತಿಳಿದಿರಲಿಲ್ಲ. ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ ನಂತರ ಒಂದು ನಂಬಿಕೆ ಮೂಡಿತು. ನಟನೆಯ ಆಸಕ್ತಿಯನ್ನೇ ಬೆಳೆಸಿಕೊಳ್ಳಬಾರದೇಕೆ ಎಂದು ಅನಿಸಿತು. ಅದೇ ಸಮಯಕ್ಕೆ ಹಿಂದಿ ಸಿನಿಮಾದಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತು' ಎಂದು ತಾವು ಸಿನಿಮಾ ಹಾದಿ ಹಿಡಿದ ಹಿನ್ನೆಲೆಯನ್ನು ವಿವರಿಸಿದರು ದಿವಿತಾ.

ಮೊದಲ ಸಿನಿಮಾ ನಂತರ ಸಿನಿಮಾರಂಗದಲ್ಲಿ ನೆಲೆಯೂರಬೇಕೆಂಬ ಆಸೆಯನ್ನು ಗಟ್ಟಿಯಾಗಿಸಿಕೊಂಡಿರುವ ಅವರೀಗ ಅದಕ್ಕೆ ಅಗತ್ಯವಿರುವ ತಯಾರಿಗಳನ್ನೂ ಮಾಡಿಕೊಳ್ಳುತ್ತಿದ್ದಾರೆ. ಮೊದಲ ಸಿನಿಮಾದಲ್ಲಿ ಹಲವು ತಾಂತ್ರಿಕ ವಿಷಯಗಳನ್ನು ಕಲಿತಿದ್ದು, ಸಿನಿಮಾ ಎನ್ನುವ ಸೃಜನಶೀಲ ಕಲೆಯನ್ನು ತಮ್ಮದೇ ರೀತಿಯಲ್ಲಿ ಪೊರೆಯುವ ಅಭಿಲಾಷೆ ಇಟ್ಟುಕೊಂಡಿದ್ದಾರೆ.

ದಿವಿತಾ ಅಭಿನಯಿಸಿರುವ 'ಲವ್ ಸ್ಟೋರೀಸ್ ನೈಂಟೀಸ್' ಹಿಂದಿ ಸಿನಿಮಾ 2025ರ ಜನವರಿಯಲ್ಲಿ ಬಿಡುಗಡೆಯಾಗಲಿದೆ. ಇದೀಗ ಕನ್ನಡ ಸಿನಿಮಾರಂಗದಲ್ಲಿ ರುಜು ಹಾಕಲು ಹೊರಟಿದ್ದು, ಸಿಂಪಲ್ ಸುನಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ದೇವರು ರುಜು ಮಾಡಿದನು' ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

'ನಾನು ಮೂಲತಃ ಮಂಗಳೂರಿನವಳಾದ್ದರಿಂದ ಕನ್ನಡ ಸಿನಿಮಾ ಮಾಡಬೇಕು ಎನ್ನುವ ತುಡಿತ ಇತ್ತು. ಬೇರೆ ಎಲ್ಲೆಲ್ಲೋ ಇದ್ದರೂ ನಮ್ಮ ನೆಲ ಎನ್ನುವ ಅಭಿಮಾನ, ಒಲವು ಇದ್ದೇ ಇರುತ್ತದೆ. ಸಿಂಪಲ್ ಸುನಿ ಸರ್ ಒಳ್ಳೆಯ ಕಥೆಯೊಂದಿಗೆ ಅಪ್ರೋಚ್ ಮಾಡಿದರು. ಸ್ಕ್ರಿಪ್ಟ್ ಹಾಗೂ ಪಾತ್ರ ನನ್ನ ಮನಸ್ಸಿಗೆ ತುಂಬಾ ಇಷ್ಟವಾಯಿತು. ಗೋವಾದ ಕೊಂಕಣಿ ಹುಡುಗಿಯಾಗಿ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಫ್ರೀ ಸ್ಪಿರಿಟ್ – ಇಂಡಿಪೆಂಡೆಂಟ್ ಹುಡುಗಿಯ ಪಾತ್ರವಿದು' ಎಂದು ನಗು ಚೆಲ್ಲಿದರು. ತಮಗೆ ಭಾವನಾತ್ಮಕವಾಗಿಯೂ ಈ ಸಿನಿಮಾ ತುಂಬಾ ಹತ್ತಿರ ಎನ್ನುವ ದಿವಿತಾ, ಅದಕ್ಕೆ ಕಾರಣವನ್ನೂ ಕೊಡುತ್ತಾರೆ. 'ಬೇರೆ ಬೇರೆ ಊರುಗಳಲ್ಲಿಯೇ ಹೆಚ್ಚಾಗಿ ಇದ್ದ ಕಾರಣ, ಕನ್ನಡ ಮಾತನಾಡಲು ಬಹಳ ಅವಕಾಶ ಸಿಕ್ಕಿರಲಿಲ್ಲ. ತುಳುವನ್ನು ಚೆನ್ನಾಗಿ ಮಾತನಾಡುತ್ತೇನೆ. ಈಗ ಕನ್ನಡ ಕಲಿಯಲು, ಮಾತನಾಡಲು ಆರಂಭಿಸಿದ್ದೇನೆ. ಕನ್ನಡದಲ್ಲಿ ಹೆಚ್ಚೆಚ್ಚು ಒಳ್ಳೆಯ ಸಿನಿಮಾಗಳನ್ನು ಮಾಡಬೇಕೆಂಬ ಆಸೆಯಿದೆ' ಎನ್ನುತ್ತಾರೆ.

ಗ್ರ್ಯಾಂಡ್ ಸ್ಕೇಲ್ ಸೆಟ್‌ಗಳನ್ನು ಹೊಂದಿರುವಂಥ ಕಥೆಗಳ, ಐತಿಹಾಸಿಕ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕೆಂಬುದು ದಿವಿತಾ ಕನಸು. ಒಳ್ಳೆಯ ಸಿನಿಮಾಗಳನ್ನು ಮಾಡಬೇಕು, ಯುವತಿಯರಿಗೆ ಸ್ಫೂರ್ತಿಯಾಗುವಂಥ ಪಾತ್ರಗಳಲ್ಲಿ ತೊಡಗಿಕೊಳ್ಳಬೇಕು ಎಂಬುದು ಅವರ ಆದ್ಯತೆಯ ವಿಷಯ. ■